ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 638 |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ತುಮಕೂರು ರಸ್ತೆ ಪಾರ್ಲೆ-ಜಿ ಬಿಸ್ಕೆಟ್ ಫ್ಯಾಕ್ಟರಿ ಹತ್ತಿರ ಸಂಗ್ರಹಿಸಲಾಗುತ್ತಿರುವ ಟೋಲ್ ಮೊತ್ತವು ಯಾವ ರಸ್ತೆಯ ಬಳಕೆಗಾಗಿ ಸಂಗ್ರಹಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | ನೆಲಮಂಗಲ ವಿಭಾಗದ ರಾಹೆ-4 (ಹೊಸ ರಾ.ಹೆ-48) ಕಿ.ಮೀ.10.00 ರಿಂದ 29.500 ರವರೆಗೆ ಬೆಂಗಳೂರಿನ ಪ್ರವೇಶ ನಿಯಂತ್ರಿತ ಹೆದ್ದಾರಿ ಯೋಜನೆಯ ಬಳಕೆಗಾಗಿ ಟೋಲ್ ಸಂಗ್ರಹಿಸಲಾಗುತ್ತಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಆ) | ಟೋಲ್ ಮುಂಚೆ ಇರುವ ಮೇಲು ಸೇತುವೆ ಬಳಸಿದರೆ ಟೋಲ್ ಮೊತ್ತ ಕಟ್ಟುವುದು ಕಡ್ಡಾಯವೇ; | ಟೋಲ್ ಮುಂಚೆ ಇರುವ ಮೇಲ್ಸೇತುವೆ ಬಳಸಿದರೆ ಟೋಲ್ ಕಟ್ಟುವುದು ಕಡ್ಡಾಯವಾಗಿರುತ್ತದೆ. ದಿನಾಂಕ: 05.12.2008ರ ರ ಗೆಜೆಟ್ ಅಧಿಸೂಚನೆ ಸಂಖ್ಯೆ: GSR 838(E) ಪ್ರಕಾರ ಶಾಶ್ವತ ಸೇತುವೆಯ ಬಳಕೆಗೆ ಶುಲ್ಕವನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಇ) | ಹಾಗಿಲ್ಲದಿದ್ದಲ್ಲಿ, ಮೇಲು ಸೇತುವೆ ಬಳಸಿ ಸರ್ವೀಸ್ ರಸ್ತೆಗೆ ಹೋಗಬೇಕಾದರೆ ಟೋಲ್ ಕಟ್ಟದೆ ಹೋಗಲು ಅವಕಾಶ ಕಲ್ಪಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಯೋಜನೆಯ ಹೆದ್ದಾರಿಯು ಸಂಪೂರ್ಣ ಪ್ರವೇಶ ನಿಯಂತ್ರಣವಾಗಿರುವುದರಿಂದ ಟೋಲ್ ಪ್ಲಾಜಾ ಶುಲ್ಕ ಪಾವತಿಸದೆ ಸರ್ವೀಸ್ ರಸ್ತೆಗೆ ಪ್ರವೇಶಿಸಲು ಅವಕಾಶವಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಈ) | ಹಾಗಿಲ್ಲದಿದ್ದಲ್ಲಿ, ಮೇಲು ಸೇತುವೆ ಬಳಸದೇ ಇರುವವರು ಸರ್ವೀಸ್ ರಸ್ತೆಗೆ ಹೋಗಲು ಅನುಮತಿ ನೀಡದಿರಲು ಕಾರಣಗಳೇನು; ಇದರಿಂದ ಅಲ್ಲಿಯ ಸುತ್ತಮುತ್ತಲ ಗ್ರಾಮದ ವಾಸಿಗಳಿಗೆ ತೊಂದರೆಯಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಬೆಂಗಳೂರು-ನೆಲಮಂಗಲ ವಿಭಾಗದ ಫ್ಲೈಓವರ್‌ನ ಪ್ರಾರಂಭದ ಸ್ಥಳದಿಂದ ಸಂಪೂರ್ಣ ಪ್ರವೇಶ ನಿಯಂತ್ರಿತ ಹೆದ್ದಾರಿಯಾಗಿರುತ್ತದೆ ಹಾಗೂ ಸ್ಥಳೀಯರ ಬಳಕೆಗಾಗಿ ಕಿ.ಮೀ.10.00 (ಗೊರಗುಂಟೆ ಪಾಳ್ಯ) ರಿಂದ ವಿಸ್ತರಣೆಯ ಅಂತ್ಯದ (ನೆಲಮಂಗಲ) ಕಿ.ಮೀ.29.500 ರವರೆಗೆ ಟೋಲ್ ಶುಲ್ಕ ಪಾವತಿಸದೆ ಸೇವಾ ರಸ್ತೆಯನ್ನು ಬಳಸಬಹುದಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 144 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು